**<u>ಸಾಕ್ಷಿಯನ್ನು ದಿನಾಂಕಃ 20.02. 2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ ಹೆಚ್ ಎಸ್ ಆರ್ ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

| ಕ್ರಮ ಸಂಖ್ಯೆ : | | ದಾಖಲೆಗಳು |
|---|---|---|
| 1 | : | ದಿಃ27.09.2021 ರ ಕ್ರಯ ಕರಾರು ಪತ್ರ |
| 2 | : | ದಿನಾಂಕಃ 18.05.2024 ರ ನೋಟೀಸ್ ನ ಕಛೇರಿ ಪ್ರತಿ |
| 3 | : | ಅಂಚೆ ರಶೀದಿ |
| 4 | : | ಅಂಚೆ ಸ್ವೀಕೃತಿ ಪತ್ರ |
| 5 | | ಪ್ರತಿವಾದಿಯರ ವಕೀಲರು ಕಳುಹಿಸಿದ ಪ್ರತ್ಯುತ್ತರ |
| 6 | : | ದಿಃ 23.07.2025 ರ ಅಂತಿಮ ನೋಟೀಸ್ ಕಛೇರಿ ಪ್ರತಿ |
| 7 | : | ಅಂಚೆ ರಶೀದಿಗಳು –5 |
| 8 | : | ಅಂಚೆ ಸ್ವೀಕೃತಿ ಪತ್ರಗಳು – 5 |

**ಮೇಲ್ಕಂಡ ದಾಖಲೆಗಳನ್ನು ನಿಶಾನೆ ಪಿಃ1 ರಿಂದ 16 ಎಂದು ಗುರುತಿಸಲಾಯಿತು.**

ನಿಪಿ 1 ರ ಕ್ರಯದ ಕರಾರು ಪತ್ರವನ್ನು 1 ನೇ ಪ್ರತಿವಾದಿಯು ನನಗೆ ಬರೆದುಕೊಟ್ಟಿದ್ದು, ನನಗೆ ಈಗ ನಿಪಿಃ1 ರ ದಾಖಲೆ ತೋರಿಸುತ್ತಿದ್ದು ಅದರಲ್ಲಿ ಅವರ ಸಹಿ ಇದೆ. ಸದರಿ ಸಹಿಯನ್ನು ನಿಪಿಃ1(ಎ) ಎಂದು ಗುರುತಿಸಲಾಯಿತು. ನಿಪಿಃ 1 ಕ್ಕೆ ಸಾಕ್ಷಿದಾರರಾಗಿ ಮಹೇಶ್ ಬಾಬು ಮತ್ತು ಶಶಿಧರ ಎನ್ನುವವರು ಸಹಿ ಹಾಕಿದ್ದು ಈಗ ನಾನು ನಿಪಿಃ1 ರ ಮೇಲೆ ಇರುವ ಅವರ ಸಹಿಗಳನ್ನು ಗುರುತಿಸುತ್ತಿದ್ದೇನೆ. ಸದರಿ ಸಹಿಗಳನ್ನು ನಿಪಿಃ1(ಬಿ) ಮತ್ತು 1(ಸಿ) ಎಂದು ಗುರುತಿಸಲಾಯಿತು. ನಿಪಿಃ1 ಅನ್ನು ಚಲುವರಾಜು ಎನ್ನುವ ಪತ್ರ ಬರಹಗಾರರು ಬಿಕಲಂ ಆಗಿ ಸಹಿ ಹಾಕಿದ್ದು, ನಾನು

ಈಗ ನಿಪಿಃ1 ರ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸದರಿ ಸಹಿಯನ್ನು ನಿಪಿಃ1(ಡಿ) ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.